ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

ಸಿ.ಸಿ.ನಂ.15623/2016

ಪ್ರಾಸಾ 1

| | |
|---|---|
| ಸಾಕ್ಷಿದಾರರ ಹೆಸರು | ಚಂದ್ರಶೇಖರ್ ಎನ್ |
| ತಂದೆಯ / ಗಂಡನ ಹೆಸರು | ನಾಗಣ್ಣ |
| ವಯಸ್ಸು | 46 |
| ಉದ್ಯೋಗ | ಎ ಎಸ್ ಐ |
| ವಾಸ | ಬೊಮ್ಮನಹಳ್ಳಿ ಬೆಂಗಳೂರು |
| | ಸತ್ಯ ಪ್ರಮಾಣ ಮಾಡಿದ ದಿನಾಂಕಃ 09.09.2021 |

ಮುಖ್ಯವಿಚಾರಣೆ ಹಿರಿಯ ಸಸಅ ಅವರಿಂದ ದಂ ಪ್ರಂ ಸಂ ಕಲಂ 299 ರಡಿಯಲ್ಲಿ

ದಿನಾಂಕ 16-7-2019 ರಂದು ಮದುಗಿರಿ ತಾಲ್ಲೂಕು ದೊಡೇರಿ ಹೊಬಳಿ, ತಿಮಲಪುರ ಗ್ರಾಮದ ಹಾಲು ಉತ್ಪಾದಕರ ಸಂಘದ ಬಳಿ ಹೋಗಿ ರಾ ಪ್ರಕರಣದ 2 ನೇ ಆರೋಪಿತನ ಬಗ್ಗೆ ವಿಚಾರಿಸಿದ್ದು ಸದರಿ ಸ್ಥಳದಲ್ಲಿದ್ದ ವ್ಯಕ್ತಿಗಳು ಆತನ ಬಗ್ಗೆ ತಿಳಿದಿಲ್ಲ ಎಂದು ಹೇಳಿದ್ದು 2 ನೇ ಆರೋಪಿ ಬಗ್ಗೆ ವಿಚಾರ ತಿಳಿದು ಬಂದಲ್ಲಿ ಪೊಲೀಸರಿಗೆ ಅಥವಾ ನ್ಯಾಯಾಲಯಕ್ಕೆ ತಿಳಿಸುವಂತೆ ಮಾಹಿತಿ ನೀಡಿರು^ೇನೇ. ನಂತರ ಸ್ಥಳದಲ್ಲಿ ಡಂಗುರ ಬಾರಿಸಿ 2 ನೇ ಆರೋಪಿತನ ಬಗ್ಗೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ತಿಳಿಸಿರುತ್ತೇನೇ. ಪಂಚರ ಸಮಕ್ಷಮ ಸದರಿ ಸ್ಥಳದಲ್ಲಿ ಮಹಜರ್ ಜರುಗಿಸಿದ್ದು ಉದ್ಘೊಷಣ ಪ್ರತಿಯನ್ನು ವಿದ್ಯುತ್ ಕಂಬಕ್ಕೆ ಹಾಗು ಮತ್ತೊಂದು ಪ್ರತಿಯನ್ನು ಸಂಘದ ಗೋಡೆಗೆ ಅಂಟಿಸಿ ಜಾರಿ ಮಾಡಿರುತ್ತೇನೇ. ಮಹಜರನ್ನು ಸ್ಥಳದಲ್ಲಿ ಸಂಜೆ 4.00 ಗಂಟೆಯಿಂದ 5.30 ರವರೆಗೆ ಬರೆದಿರುತ್ತೇನೇ. ಸಾಕ್ಷಿದಾರರು ತಾನು ಮಾಡಿದ ಮಹಜರ್ ಹಾಗೂ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಹಾಗೂ ನಿಪಿ.1 ಎ ಎಂದು ಗುರುತಿಸಲಾಯಿತು. ಉದ್ಘೊಷಣಾ ಪ್ರತಿ, ಜಪ್ತು ಆದೇಶದ ಪ್ರತಿ ಅವುಗಳನ್ನು ನಿಪಿ.2 ಮತ್ತು 3 ಎಂದು ಗುರುತಿಸಲಾಯಿತು. ತಹಸೀಲ್ದಾರ್ ರವರು ನೀಡಿದ ವರದಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಮು ಮ ದಂ ನ್ಯಾ ಬೆಂ ನಗರ.